ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

ಸ್ಪೇ (Lok)ನಂಃ 06/2014

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಬಿ.ವೆಂಕಟೇಶ್ವರರಾವ್ | ಪಿ.ಡಬ್ಲ್ಯೂ | 4 |
| ತಂದೆಯ ಹೆಸರು | : | ಬಿ.ಧನರಾಜ | ಸಿ.ಡಬ್ಲ್ಯೂ | 4 |
| ವಯಸ್ಸು | : | 20 ವರುಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಹಳೆ ಬೆಳವನೂರು ಗ್ರಾಮ, | | |

ದಿನಾಂಕಃ 30.09.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ವಿಶೇಷ ಅಭಿಯೋಜಕರಿಂದ ಃ

ಚಾ.ಸಾ.1 ನನ್ನ ದೊಡ್ಡಪ್ಪನಾಗಬೇಕು. ಆರೋಪಿ ಚಾ.ಸಾ.1 ಇವರಿಗೆ ಲಂಚದ ಹಣ ಕೇಳಿದ್ದರಿಂದ, ಚಾ.ಸಾ.1 ಇವರು ಲೋಕಾಯುಕ್ತ ಪೋಲೀಸ್, ದಾವಣಗೆರೆ ಇವರಿಗೆ ಮಾಹಿತಿ ಕೊಟ್ಟಿದ್ದರು. ಲೋಕಾಯುಕ್ತ ಪೋಲೀಸರು ಚಾ.ಸಾ.1 ಇವರಿಗೆ ವಾಯಿಸ್ ರೆಕಾರ್ಡ್ ಕೊಟ್ಟು ಆರೋಪಿಯ ಹತ್ತಿರ ಹೋಗಲು ಹೇಳಿದ್ದರು. ಮತ್ತು ಆರೋಪಿಯ ಜೊತೆಗೆ ಮಾತನಾಡುವಾಗ ವಾಯಿಸ್ ರೆಕಾರ್ಡ್ ಅನ್ನು ಉಪಯೋಗಿಸುವ ವಿಧಾನವನ್ನು ಲೋಕಾಯುಕ್ತ ಪೋಲೀಸರು ಹೇಳಿಕೊಟ್ಟಿದ್ದರು. ಚಾ.ಸಾ.1 ಇವರು ಆರೋಪಿಯನ್ನು ಭೇಟಿಯಾದಾಗ ಆರೋಪಿ ಚಾ.ಸಾ.1 ಇವರಿಗೆ ನಿಮ್ಮ ಕೆಲಸ ಮಾಡುವುದಕ್ಕೆ ಲಂಚದ ಹಣವನ್ನು ಕೊಡಬೇಕು ಮತ್ತು ನೀವೇನು ಬರಬೇಡಿ ನಿಮ್ಮ ತಮ್ಮನ ಮಗ ಅಂದರೆ ನನ್ನ ಕೈಯಲ್ಲಿ ಲಂಚದ ಹಣವನ್ನು ಕಳುಹಿಸಿಕೊಡಿ ಅಂತಾ ಹೇಳಿದ್ದರು. ಚಾ.ಸಾ.1 ಇವರು ಪುನಃ ಲೋಕಾಯುಕ್ತ ಪೋಲೀಸರಿಗೆ ಭೇಟಿಯಾಗಿ ಮಾಹಿತಿಯನ್ನು ಕೊಟ್ಟಿರುತ್ತಾರೆ. ಲೋಕಾಯುಕ್ತ ಪೋಲೀಸರು ಇಬ್ಬರು ಪಂಚರನ್ನು ಕರೆಸಿ ಚಾ.ಸಾ.1 ಇವರಿಗೆ ಪರಿಚಯ ಮಾಡಿಕೊಟ್ಟರು ಮತ್ತು ನಮಗೆ ಎಲ್ಲಾ ಮಾಹಿತಿಯನ್ನು ಕೊಟ್ಟು ನನಗೆ ಬಟನ್ ಕ್ಯಾಮರಾ ಅಳವಡಿಸಿದರು. ನಂತರ ಎಲ್ಲರೂ ಮಾತನಾಡಿಕೊಂಡು ಎರಡು ವಾಹನದಲ್ಲಿ ಅಂದರೆ ನಮ್ಮ ಮತ್ತು ಪೋಲೀಸರ ವಾಹನದಲ್ಲಿ ಆರೋಪಿಯ ಕಛೇರಿಗೆ ಹೋದೆವು. ಮತ್ತು ಲೋಕಾಯುಕ್ತ ಪೋಲೀಸರು ನನಗೆ ಬಟನ್ ಕ್ಯಾಮರಾ ಆನ್ ಮಾಡಿಕೊಟ್ಟರು. ಅದಕ್ಕಿಂತ ಮುಂಚೆ ಲೋಕಾಯುಕ್ತ ಪೋಲೀಸರು ಲಂಚದ ಹಣ ಅಂದರೆ 500 ರೂಪಾಯಿಯ ಎರಡು ನೋಟುಗಳನ್ನು ಫಿನಾಪಿನ್ ಪೌಡರ್ ಸಿಂಪಡಿಸಿ ನನ್ನ ಶರ್ಟ ನ ಜೇಬಿನಲ್ಲಿ ಇಟ್ಟಿದ್ದರು. ಮತ್ತು ಲೋಕಾಯುಕ್ತ ಪೋಲೀಸರು ನನಗೆ

ಆರೋಪಿ ಲಂಚದ ಹಣ ಕೇಳಿದಾಗ ಲಂಚದ ಹಣ ಕೊಡಬೇಕು ಅಂತಾ ಸೂಚನೆ ಕೊಟ್ಟಿದ್ದರು. ಅದರಂತೆ ಲೋಕಾಯುಕ್ತ ಪೋಲೀಸರು ಆರೋಪಿಗೆ ಲಂಚ ಕೊಟ್ಟ ಮೇಲೆ ನಾನು ಪೋಲೀಸರಿಗೆ ಸನ್ನೆ ಮಾಡಬೇಕು ಅಂತಲೂ ಸೂಚನೆ ಕೊಟ್ಟಿದ್ದರು. ದಿಃ 30/07/2013 ರಂದು ಲೋಕಾಯುಕ್ತ ಪೋಲೀಸರು ತನ್ನ ಕಛೇರಿಯಲ್ಲಿ ಎಲ್ಲಾ ಪ್ರಯೋಗಗಳನ್ನು ಮಾಡಿ ನಮಗೆ ತೋರಿಸಿದ ನಂತರ ಅದೇ ದಿವಸ ನಾವೆಲ್ಲರೂ ಆರೋಪಿಯ ಕಛೇರಿಗೆ ಮದ್ಯಾಹ್ನ 3/15 ಗಂಟೆಗೆ ಹೋದೆವು. ನಾನು ನೇರವಾಗಿ ಆರೋಪಿ ಕುಳಿತುಕೊಳ್ಳುವ ಸ್ಥಳಕ್ಕೆ ಹೋದೆ. ನನ್ನ ಜೊತೆಗೆ ಚಾ.ಸಾ.2 ಸಹ ಬಂದಿದ್ದರು. ನಾನು ಆರೋಪಿಗೆ ಚಾ.ಸಾ.1 ಇವರಿಗೆ ಸಂಬಂಧಪಟ್ಟ ಕೆಲಸವಾದ ದಾಖಲೆಯನ್ನು ಕೇಳಿದೆ, ಆಗ ಆರೋಪಿ ಲಂಚದ ಹಣ ಕೇಳಿದ, ನಾನು ಆರೋಪಿಗೆ 1000 ರೂಪಾಯಿ ಅಂದರೆ 500 ರೂಪಾಯಿ ಮುಖಬೆಲೆಯುಳ್ಳ ಎರಡು ನೋಟುಗಳನ್ನು ಆರೋಪಿಯ ಕೈಗೆ ಕೊಟ್ಟೆ, ಆರೋಪಿ ಸ್ಕೆಚ್ ನನ್ನ ಕೈಯಲ್ಲಿ ಕೊಟ್ಟಿರುತ್ತಾರೆ. ನಾನು ಹೊರಗೆ ಬಂದು ಕರವಸ್ತ್ರದಿಂದ ಮುಖ ಒರೆಸಿಕೊಳ್ಳುವ ಮೂಲಕ ಪೋಲೀಸರಿಗೆ ಸನ್ನೆ ಮಾಡಿದೆ. ನಂತರ ಲೋಕಾಯುಕ್ತ ಪೋಲೀಸ್ ಇನ್ ಸ್ಪೆಕ್ಟರ್ ಮತ್ತು ಅವರ ಸಿಬ್ಬಂದಿ ಮತ್ತು ಪಂಚರು ಆರೋಪಿಯ ಬಳಿ ಬಂದು ತಮ್ಮ ಐಡಿ ಕಾರ್ಡನ್ನು ಆರೋಪಿಗೆ ತೋರಿಸಿ ತಮ್ಮ ಪರಿಚಯ ಮಾಡಿಕೊಂಡರು. ನಂತರ ಪೋಲೀಸರು ಬಟ್ಟಲಲ್ಲಿ ದ್ರಾವಣವನ್ನು ತಯಾರಿಸಿ, ಮತ್ತು ಆರೋಪಿಗೆ ಲಂಚದ ಹಣ ಎಲ್ಲಿ ಇಟ್ಟಿದ್ದೀಯಾ ಅಂತಾ ಪೋಲೀಸರು ವಿಚಾರಿಸಿದರು. ಆರೋಪಿ ಲಂಚದ ಹಣವನ್ನು ತಾನು ಕೂಡುವ ಸ್ಥಳದಲ್ಲಿ ಇದ್ದ ಅಲಮಾರಿಯಲ್ಲಿ ಇಟ್ಟಿದ್ದು, ಅದನ್ನು ಹೊರಗೆ ತೆಗೆದುಕೊಟ್ಟ. ಮತ್ತು ಆರೋಪಿಯ ಕೈಯನ್ನು ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿತು. ಪೋಲೀಸರು ಲಂಚದ ಹಣವನ್ನು ಜಪ್ತು ಮಾಡಿದರು. ಮತ್ತು ಗುಲಾಬಿ ಬಣ್ಣಕ್ಕೆ ತಿರುಗಿದ ದ್ರಾವಣವನ್ನು ಸ್ಯಾಂಪಲ್ ಬಾಟಲಿನಲ್ಲಿ ಹಾಕಿ ಸೀಲ್ ಮಾಡಿದರು. ನಾನು ಈಗ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ. ಮೇಲೆ ಹೇಳಿದ ಎಲ್ಲಾ ನಡಾವಳಿಕೆಗಳು 1 ವರೆ ತಾಸು ಆಗಿದ್ದು ಇರುತ್ತದೆ. ಪೋಲೀಸರು ಪ್ರಾಯೋಗಿಕ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆ ಎರಡು ಮಾಡಿದ್ದು, ನಾನು ಈಗ ಪ್ರಾಯೋಗಿಕ ಪಂಚನಾಮೆ ನೋಡುತ್ತಿದ್ದು ಅದು ಈಗಾಗಲೇ ನಿ.ಪಿ.2 ಅಂತಾ ಗುರುತಿಸಿದ್ದು, ಅದರ ಮೇಲೆ ಇರುವ ನನ್ನ ಸಹಿ ನಿ.ಪಿ.2 ಡಿ ಅಂತಾ ಗುರುತಿಸಲಾಯಿತು. ಮತ್ತು ಟ್ರ್ಯಾಪ್ ಪಂಚನಾಮೆ ನೋಡುತ್ತಿದ್ದು, ಅದು ಈಗಾಗಲೇ ನಿ.ಪಿ.3 ಅಂತಾ ಗುರುತಿಸಿದ್ದು, ಅದರ ಮೇಲೆ ಇರುವ ನನ್ನ ಸಹಿ ನಿ.ಪಿ.3 ಬಿ ಇರುತ್ತದೆ. ನಾನು ಈಗ ನಿ.ಪಿ.12 ನೋಡುತ್ತಿದ್ದು, ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ12 ಬಿ ಅಂತಾ ಗುರುತಿಸಲಾಯಿತು. ನಾನು ಈಗ ನಿ.ಪಿ.8 ನೋಡುತ್ತಿದ್ದು, ಅದರ ಮೇಲೆ ಇರುವ ನನ್ನ ಸಹಿಯನ್ನು ನಿ.ಪಿ.8 ಸಿ ಅಂತಾ ಗುರುತಿಸಲಾಯಿತು. ಪೋಲೀಸರು ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ

ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ನ್ಯಾಯಾಧೀಶರು, ವಿಶೇಷ ನ್ಯಾಯಾಲಯ,
ದಾವಣಗೆರೆ.